ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-12-1995.

# *ವ್ಯರ್ಥ ಮಾತು, ಡಿಸ್ಟರ್ಬ್ ಮಾಡುವ ಮಾತುಗಳಿಂದ ಸ್ವಯಂನ್ನು ಮುಕ್ತರನ್ನಾಗಿ ಮಾಡಿಕೊಂಡು ಮಾತಿನ ಉಳಿತಾಯ ಮಾಡಿರಿ.*

(व्यर्थ बोल, डिस्टर्ब करने वाले बोल से स्वयं को मुक्त कर बोल की इकॉनॉमी करो)

ಇಂದು ಬಾಪ್‌ದಾದಾ ನಿಮ್ಮೆಲ್ಲರ ಜೊತೆ ಜೊತೆ ನಾಲ್ಕೂ ಕಡೆಯ ಆತ್ಮರನ್ನೂ ನೋಡುತ್ತಿದ್ದಾರೆ. ನಾಲ್ಕೂ ಕಡೆಯ ಮಕ್ಕಳು ಆಕಾರ ರೂಪದಿಂದ ಬಾಪ್‌ದಾದಾರವರ ಎದುರಿನಲ್ಲಿ ಇದ್ದಾರೆ. ಡಬಲ್ ಸಭೆ, ಸಾಕಾರೀ ಹಾಗೂ ಆಕಾರೀ, ಎರಡೂ ಎಷ್ಟು ದೊಡ್ಡ ಸಭೆಗಳಾಗಿವೆ. ಬಾಪ್‌ದಾದಾರವರು ಎರಡೂ ಸಭೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ, ಏಕೆಂದರೆ ಬಾಪ್‌ದಾದಾರವರು ಮಕ್ಕಳು ಪ್ರತಿಯೊಬ್ಬರನ್ನೂ ಎರಡು ರೂಪಗಳಲ್ಲಿ ನೋಡುತ್ತಿದ್ದಾರೆ. 1.ಪ್ರತಿಯೊಬ್ಬ ಮಗುವೂ ಈ ಸರ್ವ ಮನುಷ್ಯಾತ್ಮರ ಪೂರ್ವಜರಾಗಿದ್ದಾರೆ. ಇಡೀ ವೃಕ್ಷದ ಬುನಾದಿ(ಫೌಂಡೇಷನ್) ಆಗಿದ್ದಾರೆ. ಏಕೆಂದರೆ ಬೇರಿನಿಂದ ಇಡೀ ವೃಕ್ಷವು ಬೆಳೆಯುತ್ತದೆ. ಹಾಗೂ 2.ಇನ್ನೊಂದು ರೂಪದಲ್ಲಿ ಪೂರ್ವಜರೆಂದು ಹಿರಿಯರಿಗೂ ಹೇಳುತ್ತಾರೆ. ಹೀಗೆ ಸೃಷ್ಟಿಯ ಅದಿಯಲ್ಲಿ ನಿಮ್ಮದೇ ಪಾತ್ರವಿದೆ. ಆದ್ದರಿಂದ ಹಿರಿಯರಲ್ಲಿ ಹಿರಿಯರಾಗಿದ್ದೀರಿ. ಈ ಕಾರಣದಿಂದ ಸರ್ವ ಆತ್ಮರ ಪೂರ್ವಜರಾಗಿದ್ದೀರಿ, ಜೊತೆ ಜೊತೆಯಲ್ಲಿ ಶ್ರೇಷ್ಠಾತಿಶ್ರೇಷ್ಠರಾದ ತಂದೆಯ ಪ್ರಥಮ ರಚನೆಯು ನೀವು ಬ್ರಾಹ್ಮಣ ಆತ್ಮರಾಗಿದ್ದೀರಿ. ಆದ್ದರಿಂದ ಹೇಗೆ ಸರ್ವೋನ್ನತನಾದವರು ಭಗವಂತ ಆಗಿದ್ದಾರೆಯೋ. ಹಾಗೆ ಹಿರಿಯರಿಗಿಂತಲೂ ಹಿರಿಯ ಪೂರ್ವಜರು ನೀವಾಗಿದ್ದೀರಿ. ಆದ್ದರಿಂದ ಇಷ್ಟೊಂದು ಪೂರ್ವಜ ಮಕ್ಕಳೆಲ್ಲರನ್ನೂ ನೋಡಿ ತಂದೆಯು ಹರ್ಷಿತನಾಗುತ್ತಾರೆ. ನಾವು ಪೂರ್ವಜರಾಗಿದ್ದೇವೆಂದು ನೀವೂ ಹರ್ಷಿತರಾಗುತ್ತೀರಾ? ಇದೇ ನಿಶ್ಚಯ ಹಾಗೂ ನಶೆಯಲ್ಲಿ ಇರುತ್ತೀರಾ? ಹೀಗೆ ಬಾಪ್‌ದಾದಾರವರು ಇಂದು ಪೂರ್ವಜರ ಸಭೆಯನ್ನು ನೋಡುತ್ತಿದ್ದಾರೆ. ನೀವು ಯಾರು ಯಾರು ತಂದೆಯ ಮಕ್ಕಳಾಗಿದ್ದೀರೋ ಅವರೆಲ್ಲರೂ ಮಾಯೆಯಿಂದ ಪಾರಾಗಿದ್ದೀರಿ. ಮಗ ಎನ್ನುವುದರ ಅರ್ಥವೇ ತಂದೆಯ ಸಂಬಂಧಿಯಾಗುವುದು ಅರ್ಥಾತ್ ಮಗನಾಗುವುದು. ಹೀಗೆ ಮಾಯೆಯಿಂದ ಪಾರಾಗಿರುವವರು ತಂದೆಯ ಮಕ್ಕಳಾಗುತ್ತಾರೆ. ನೀವೆಲ್ಲರೂ ಮಾಯೆಯಿಂದ ಪಾರಾಗಿರುವವರಾಗಿದ್ದೀರಲ್ಲವೇ ಅಥವಾ ಯಾವಾಗಲಾದರೂ ಮಾಯೆಯ ಚಕ್ರದಲ್ಲಿ ಬಂದುಬಿಡುತ್ತೀರೋ? ಎಂತಹ ಚಕ್ರವ್ಯೂಹವಿರುತ್ತದೆಯೆಂದರೆ, ಅನೇಕ ತರಹದರಿಂದ ಹೊರಬರಬೇಕಾಗುತ್ತದೆ ಎಂದು ಹೇಳುತ್ತಾರಲ್ಲವೇ. ಆದ್ದರಿಂದ ಯಾವುದೇ ಮಾಯೆಯ ಚಕ್ರವ್ಯೂಹದಲ್ಲಿ ಸಿಕ್ಕಿಬೀಳುವವರಂತೂ ಅಲ್ಲವಲ್ಲವೇ? ಏನಾದರೂ ಚಕ್ರವಿದೆಯೇ? ಪಾರಾಗಿದ್ದೀರಾ? (ಹೌದು ಬಾಬಾ) ಹೌದು ಬಾಬಾ ಎಂದು ಹೇಳಿ ಹೋಗುವುದು ಹಾಗೂ ಅಲ್ಲಿ ಹೋಗಿ ಇಲ್ಲ ಬಾಬಾ ಎಂದು ಹೇಳುವುದು ಹೀಗೆ ಮಾಡಬೇಡಿರಿ. ಯಾವಾಗ ಒಂದುಸಲ ಚಕ್ರದಿಂದ ಹೊರಗೆ ಬರುವ ಮಾರ್ಗ ಅಥವಾ ವಿಧಿಯನ್ನು ಕಲಿತುಕೊಳ್ಳುತ್ತೀರೋ ಆಮೇಲೆ ಸಿಕ್ಕಿಹಾಕಿಕೊಳ್ಳುವ ಪ್ರಮೇಯವೇ ಇಲ್ಲ. ಮಾಯೆಯನ್ನೂ ಸಹ

ಚೆನ್ನಾಗಿ ತಿಳಿದುಕೊಂಡು ಬಿಟ್ಟಿದ್ದೀರಲ್ಲವೇ ಅಥವಾ ಯಾವಾಗಲಾದರೂ ತಿಳಿಯದವರಾಗಿ ಬಿಡುತ್ತೀರೋ? ಆಮೇಲೆ ನನಗಂತೂ ಇದು ಮಾಯೆಯಾಗಿದೆಯೆಂದು ಗೊತ್ತೇ ಆಗಲಿಲ್ಲ ಎಂದು ಹೇಳುತ್ತೀರೋ? ಏಕೆಂದರೆ ಹೇಗೆ ಈಗಿನ ಕಾಲದ ಫ್ಯಾಷನ್ ಏನಾಗಿದೆಯೆಂದರೆ ಭಿನ್ನ ಭಿನ್ನ ಮುಖವಾಡವನ್ನು ತುಂಬಾ ಧರಿಸುತ್ತಾರೆ. ಈಗತಾನೇ ಏನೋ ಆಗುತ್ತಾರೆ. ಹಾಗೂ ಇದೀಗಲೇ, ಬೇರೆ ಏನೋ ಆಗುತ್ತಾರೆ. ಹಾಗೆಯೇ ಮಾಯೆಯ ಬಳಿಯೂ ಈ ಸಿಕ್ಕಿ ಬೀಳಿಸುವ ಮುಖವಾಡಗಳು ತುಂಬಾ ಇವೆ. ಅದರ ಬಳಿ ಒಳ್ಳೆಯ ದೊಡ್ಡ ಅಂಗಡಿಯಿದೆ. ಯಾವ ಸಮಯದಲ್ಲಿ ಯಾವ ರೂಪವನ್ನು ಧಾರಣೆ ಮಾಡಬಯಸಿದರೆ, ಆ ಸಮಯದಲ್ಲಿ ಅದನ್ನು ಧಾರಣೆ ಮಾಡಿಬಿಡುತ್ತದೆ. ಹಾಗೂ ಒಂದುವೇಳೆ ತಿಳಿದೋ ತಿಳಿಯದೆಯೋ ಸಿಕ್ಕಿಬಿದ್ದರೆ ಅದರಿಂದ ಹೊರಬರುವುದರಲ್ಲಿ ತುಂಬಾ ಸಮಯವು ಹಿಡಿಯುತ್ತದೆ. ಹಾಗೂ ಸಂಗಮಯುಗದ ಒಂದು ಸೆಕೆಂಡ್ ವ್ಯರ್ಥವಾಗಿ ಕಳೆದು ಹೋಗುವುದು ಅರ್ಥಾತ್ ಒಂದು ವರ್ಷವನ್ನು ಕಳೆದುಬಿಡುವುದಾಗಿದೆ. ಕೇವಲ ಒಂದು ಸೆಕೆಂಡ್ ಅಲ್ಲ. ಸಂಗಮಯುಗವು ಎಷ್ಟು ಸಣ್ಣ ಯುಗವಾಗಿದೆ. ವಿಚಾರ ಮಾಡಿರಿ. ಈಗಂತೂ ಡೈಮಂಡ್ ಜೂಬ್ಲಿಯನ್ನು (ವಜ್ರಮಹೋತ್ಸವವನ್ನು) ಆಚರಣೆ ಮಾಡಲಿದ್ದೀರಿ ಹಾಗೂ ಅತಿ ಸ್ವಲ್ಪ ಸಮಯದಲ್ಲಿ ಏನು ಆಗಬೇಕೆಂದಿದ್ದೀರೋ ಅದು ಆಗಬಹುದು, ಏನು ಜಮಾ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಬಹುದು. ಹೀಗೆ ಬಾಪ್‌ದಾದಾರವರು ಏನು ನೋಡುತ್ತಿದ್ದಾರೆ ಎಂದರೆ, ಈಗ ತಯಾರಾಗುವ ಸಮಯವು ಎಷ್ಟು ಕಡಿಮೆ ಇದೆಯೆಂದು. ಹಾಗೂ ಇಡೀ ಕಲ್ಪದವರೆಗೆ ಶ್ರೇಷ್ಠರಾಗುವಿರಿ, ಐದು ಸಾವಿರ ವರ್ಷಗಳ ಕಲ್ಪ ಹಾಗೂ ಈಗಿನ 60 ವರ್ಷದಲ್ಲಿ ಎಷ್ಟು ಅಂತರವಿದೆ. ಮುಂದೆ ಎಷ್ಟೇ ಸಮಯ ಉಳಿದಿದ್ದರೂ ಸಾವಿರದಷ್ಟು ಇರಲಾರದು ಅಲ್ಲವೇ.

ಆದ್ದರಿಂದ ಈ ಸ್ವಲ್ಪ ಸಮಯದಲ್ಲಿ ರಾಜ್ಯಾಧಿಕಾರಿ ಆಗುವ ಹಾಗೂ ರಾಯಲ್ ಫ್ಯಾಮಿಲಿಯಲ್ಲಿ ಬರುವ ಸಲುವಾಗಿ ಏನು ಮಾಡಬೇಕು? ಸಂಖ್ಯಾ ಪರವಾಗಿ ನೋಡಿದರೆ ಸತ್ಯಯುಗದ ಸಿಂಹಾಸನ ಎಂಬುದು ಎಲ್ಲರಿಗೂ ಲಭಿಸುವುದಿಲ್ಲ ತಾನೇ! ಮೊದಲ ಲಕ್ಷ್ಮೀನಾರಾಯಣರು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ ಆದರೆ ಲಕ್ಷ್ಮೀನಾರಾಯಣರ ಉನ್ನತ ಕುಟುಂಬದಲ್ಲಿ ಜನ್ಮವನ್ನು ಪಡೆಯುವವರು ಕೂಡ ಅವರ ಸಮಾನವಾದ ಗೌರವವನ್ನು, ಸ್ನೇಹವನ್ನು ಪಡೆಯುತ್ತಾರೆ. ಆದ್ದರಿಂದ ಮೊದಲ ರಾಜ್ಯಧಾನಿಯ ಉನ್ನತ ಕುಟುಂಬದಲ್ಲಿ ಬರುವವರು ಕೂಡ ಮೊದಲ ನಂಬರೀನವರೇ ಆಗಿದ್ದಾರೆ. ದೊಡ್ಡ ಸಿಂಹಾಸನದ ಮೇಲೆ ಕುಳಿತುಕೊಳ್ಳದಿದ್ದರೂ ಸಹ ಮೊದಲ ನಂಬರಿನ ಪ್ರಾಲಬ್ಧ ಲಭಿಸುತ್ತದೆ. ಇಲ್ಲದಿದ್ದರೆ ತ್ರೇತಾಯುಗದವರೆಗೂ ಕೂಡ ನಿಮ್ಮೆಲ್ಲರಿಗೆ ಸಿಂಹಾಸನ ಲಭಿಸುವುದಿಲ್ಲ ಆದರೆ ಎಲ್ಲರಿಗೂ ವಿಶ್ವರಾಜ್ಯಾಧಿಕಾರಿ ಆಗಬೇಕು ಎಂಬ ಲಕ್ಷ್ಯವಿದೆ ಅಲ್ಲವೇ ಅಥವಾ ಅಲ್ಲಿ ಕೂಡ ಒಂದು ದೇಶಕ್ಕೆ ರಾಜರಾಗುತ್ತೀರಾ. ಆದ್ದರಿಂದ ಮೊದಲ ನಂಬರ್ ಉನ್ನತ ಕುಟುಂಬದಲ್ಲಿ ಬರುವುದು ಕೂಡ ಶ್ರೇಷ್ಠ ಪುರುಷಾರ್ಥವೇ ಆಗಿದೆ. ಕೆಲವರಿಗೆ ಸಿಂಹಾಸನ ಲಭಿಸುತ್ತದೆ ಇನ್ನೂ ಕೆಲವರಿಗೆ ಉನ್ನತ ಕುಟುಂಬ ಲಭಿಸುತ್ತದೆ. ಅದಕ್ಕೆ ಕೂಡ ಒಂದು ಗುಹ್ಯ ರಹಸ್ಯವಿದೆ.

ಯಾರು ಸದಾ ಸಂಗಮಯುಗದಲ್ಲಿ ತಂದೆಯ ಹೃದಯ ಸಿಂಹಾಸನದ ಮೇಲೆ ಸ್ವತಹವಾಗಿ ಹಾಗೂ ಸದಾ ಇರುತ್ತಾರೆಯೋ ಆಗಾಗ ಇರುವುದಲ್ಲ, ಆದಿಯಿಂದ ಅಂತ್ಯದವರೆಗೆ, ಸ್ವಪ್ನದಲ್ಲಾಗಲಿ, ಸಂಕಲ್ಪದಲ್ಲಾಗಲಿ, ಅಪವಿತ್ರತೆಯನ್ನು ಮುಟ್ಟದೇ, ಸದಾ ಪವಿತ್ರತೆಯ ವ್ರತದಲ್ಲಿ ಇರುತ್ತಾರೆಯೋ ಆ ಶ್ರೇಷ್ಠಾತ್ಮರೇ

ಸಿಂಹಾಸನಾಧಿಕಾರಿಯಾಗುತ್ತಾರೆ. ಯಾರಾದರೆ ನಾಲ್ಕೂ ಸಬ್ಜೆಕ್ಟ್ನಳಲ್ಲಿ ಒಳ್ಳೆಯ ಅಂಕಗಳು ಪಡೆಯುತ್ತಾರೆಯೋ ಆದಿಯಿಂದ ಅಂತ್ಯದವರೆಗೂ ಒಳ್ಳೆಯ ನಂಬರ್‌ನಲ್ಲಿ ಪಾಸ್ ಆಗುತ್ತಾರೆಯೋ ಅಂತಹವರನ್ನೇ ಪಾಸ್ ವಿತ್ ಆನರ್ ಎಂದು ಕರೆಯುತ್ತಾರೆ. ಮಧ್ಯಮಧ್ಯದಲ್ಲಿ ಅಂಕಗಳು ಕಡಿಮೆಯಾಗಿ ಮತ್ತೆ ಮೇಕಪ್ ಮಾಡಿಕೊಳ್ಳುವರು ಅಲ್ಲ. ಆದಿಯಿಂದ ನಾಲ್ಕೂ ಸಬ್ಜೆಕ್ಟ್ನಳಲ್ಲಿ ತಂದೆಯ ಮನಸ್ಸಿಗೆ ಇಷ್ಟವಾದವರೇ ಸಿಂಹಾಸನವನ್ನು ಪಡೆಯಬಲ್ಲರು. ಅದರೊಂದಿಗೆ ಬ್ರಾಹ್ಮಣ ಪರಿವಾರದಲ್ಲಿ ಸರ್ವರಿಗೆ ಪ್ರಿಯವಾಗಿ, ಸರ್ವರಿಗೆ ಸಹಯೋಗಿಯಾಗಿ ಇರಬೇಕು. ಬ್ರಾಹ್ಮಣ ಪರಿವಾರದ ಪ್ರತಿಯೊಬ್ಬರೂ ಮನಸ್ಸಿನಿಂದ ಗೌರವಿಸಬೇಕು ಅಂತಹ ಗೌರವ ಉಳ್ಳವರೇ ಸಿಂಹಾಸನಾಧಿಕಾರಿಯಾಗಬಲ್ಲರು. ಒಂದು ವೇಳೆ ಈ ಎಲ್ಲಾ ವಿಷಯಗಳಲ್ಲಿ ಯಾವುದೋ ಒಂದು ವಿಷಯದಲ್ಲಿ ಲೋಪವಿದ್ದರೂ ಅವರು ನಂಬರ್‌ವಾರ್‌ಆಗಿ ಉನ್ನತ ಕುಟುಂಬದಲ್ಲಿ ಹೋಗುತ್ತಾರೆ. ಅವರು ಆದಿಯಲ್ಲಾದರೂ ಬರಬಹುದು, ಎಂಟನೆಯ ಜನ್ಮದಲ್ಲಾದರೂ ಬರಬಹುದು ಅಥವಾ ತ್ರೇತಾಯುಗದಲ್ಲಾದರೂ ಬರಬಹುದು. ಸಿಂಹಾಸನಾಧಿಕಾರಿಯಾಗಬೇಕೆಂದರೆ ಈ ಎಲ್ಲಾ ವಿಷಯಗಳನ್ನು ಪರಿಶೀಲಿಸಿಕೊಳ್ಳಿರಿ. ಒಂದುವೇಳೆ ಸೇವೆಯಲ್ಲಿ 100 ಮಾರ್ಕ್ಸ್ (ಅಂಕಗಳನ್ನು) ಜಮಾ ಮಾಡಿಕೊಂಡು, ಧಾರಣೆಯಲ್ಲಿ 20% ದೊರೆತಿದ್ದರೆ ಏನಾಗುವುದು? ಅವರು ಅಧಿಕಾರಿಯಾಗುವರೇ? ಹಲವು ಮಕ್ಕಳು ಅನ್ಯ ಸಬ್ಜೆಕ್ಟ್ ಗಳಲ್ಲಿ ಮುಂದೆ ಹೋಗಿ ಬಿಡುತ್ತಾರೆ. ಆದರೆ ಪ್ರಾಕ್ಟಿಕಲ್ (ನಿತ್ಯ ಜೀವನದಲ್ಲಿ) ಧಾರಣೆಯಲ್ಲಿ ಎಂತಹ ಸಮಯವೋ ಅದರ ಅನುಸಾರವಾಗಿ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುತ್ತಾರೋ ಅವರು ರಿಯಲ್ ಗೋಲ್ಡ್ (ಅಪ್ಪಟ ಬಂಗಾರ) ಆಗುತ್ತಾರೆ. ಒಮ್ಮೊಮ್ಮೆ ಮಾಯೆಯು ಮಕ್ಕಳಿಗಿಂತಲೂ ಚತುರ ಆಗಿಬಿಡುತ್ತದೆ. ಅದು ತಕ್ಷಣವೇ ಸಮಯಾನುಸಾರವಾಗಿ ಸ್ವರೂಪವನ್ನು ಧಾರಣೆ ಮಾಡಿಬಿಡುತ್ತದೆ. ಹಾಗೂ ಮಕ್ಕಳು ಏನು ಹೇಳುತ್ತಾರೆ. ತಂದೆಯ ಬಳಿಯಂತೂ ಎಲ್ಲರ ಬಗ್ಗೆಯ ವರದಿಯು ಬರುತ್ತದೆ. ಒಂದುವೇಳೆ ಯಾರಾದರೂ ತಪ್ಪು ಮಾಡಿದರೆ ಹಾಗೂ ಇನ್ನೊಬ್ಬರು ಸರಿಯಾಗಿ ನಡೆದುಕೊಂಡರೆ ಅಥವಾ ಇಬ್ಬರಲ್ಲಿಯೂ ಏನಾದರೂ ಲೋಪದೋಷವಿದ್ದರೆ, ನೀವು ಪೂರ್ತಿ ಸರಿಯಾಗಿದ್ದು, ಅವರದು ತಪ್ಪಿದ್ದರೆ ಎಂತಹ ಸಮಯವೋ ಅಂತಹ ವಾಯುಮಂಡಲವು ಕಂಡುಬರುತ್ತದೆ. ಸಾಮಾನ್ಯವಾಗಿ ನಿಮನ್ನೇ ಪರಿವರ್ತನೆ ಮಾಡಿಕೊಳ್ಳಬೇಕಾಗುತ್ತದೆ. ಸಮಾವೇಶ ಮಾಡಿಕೊಳ್ಳ ಬೇಕಾಗಬಹುದು. ಸಮಾಪ್ತಿ(ನಿರ್ಮೂಲ) ಮಾಡಬೇಕಾಗಬಹುದು ಅಥವಾ ಪಕ್ಕಕ್ಕೆ ಇಡಬೇಕಾಗಿಯೂ ಬರಬಹುದು. ಆದರೆ ಮಕ್ಕಳು ಏನು ಹೇಳುತ್ತಾರೆಂದರೆ, ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರತಿಯೊಂದು ಘಟನೆಯಲ್ಲಿಯೂ ನಾನೇ ಸಾಯಬೇಕೇನು, ಸಾಯುವುದಕ್ಕಾಗಿ ನಾನು, ಮೋಜು ಮಾಡಲು ಇವರು ಇದ್ದಾರೆಯೇ ಎಂದು ಕೇಳುತ್ತಾರೆ. ಸದಾ ಸಾಯಬೇಕಾಗುತ್ತದೆ. ಇದಂತೂ ತುಂಬಾ ಕಷ್ಟವಿದೆ. ಮರುಜೀವಾ ಅಂತೂ ಆಗಿಬಿಟ್ಟಿರಿ. ಅದಂತೂ ಸಹಜವಾಗಿದೆ. ಬ್ರಹ್ಮಾಕುಮಾರ ಕುಮಾರಿಯರು ಆಗಿಬಿಟ್ಟಿದ್ದರಿಂದ ಮರುಜೀವಾ (ಸತ್ತು ಬದುಕಿದವರು) ಅದಿರಲ್ಲವೇ ಈ ಸಾಯುವುದಂತೂ ತುಂಬಾ ಸಹಜವಾಗಿ ಆಗಿಬಿಟ್ಟಿತು ಸತ್ತು ಹೋದಿರಿ. ಬ್ರಹ್ಮಾಕುಮಾರಿ ಆಗಿಬಿಟ್ಟಿದ್ದೀರಿ, ಆದರೆ ಈ ಪದೇ ಪದೇ ಸಾಯುವುದು ತುಂಬಾ ಕಷ್ಟವಿದೆ ಕಷ್ಟವಾಗಿದೆಯಲ್ಲವೇ! ಸಣ್ಣವರು ಏನು ಹೇಳುತ್ತಾರೆಂದರೆ, ನಾವೇ ಜಾಸ್ತಿ ಸಾಯಬೇಕಾಗುತ್ತದೆ ಎಂದು ಹಾಗೂ ದೊಡ್ಡವರು ಏನು ಹೇಳುತ್ತಾರೆಂದರೆ, ನಾವೇ ಜಾಸ್ತಿ ಕೇಳಬೇಕಾಗುತ್ತದೆ ಎಂದು ಹೀಗೆ ನೀವು ಸಾಯಬೇಕಾಗುತ್ತದೆ ಹಾಗೂ ಅವರು ಕೇಳಬೇಕಾಗುತ್ತದೆ. ಆದ್ದರಿಂದ ಯಾರು ಸಾಯಬೇಕಾಗುತ್ತದೆ, ಯಾರು ಸತ್ತರು? ಒಬ್ಬರು ಸತ್ತರೇ? ಅಥವಾ ಇಬ್ಬರೂ ಸತ್ತರೇ? ಇಬ್ಬರೂ ಸತ್ತಿದ್ದರೆ, ಪ್ರಶ್ನೆಯೇ ಸಮಾಪ್ತಿಯಾಯಿತು. ನಾಟಕವು

ಸಮಾಪ್ತಿಯಾಯಿತು ಆದ್ದರಿಂದ ಸಾಯುವುದು ಬರುತ್ತದೆಯೇ ಅಥವಾ ಸ್ವಲ್ಪ ಕಷ್ಟವೆನಿಸುತ್ತದೆಯೋ? ಸ್ವಲ್ಪ ಉಸಿರು ಕಟ್ಟುತ್ತದೆ, ಕಷ್ಟಪಟ್ಟು ಉಸಿರಾಟ ಮಾಡಬೇಕಾಗುತ್ತದೆ. ತೊಂದರೆಯಾಗುತ್ತದೆಯೇ? ನಾನೇ ಸಾಯಬೇಕೇ, ನಾನೇ ಪರಿವರ್ತನೆಯಾಗಬೇಕೇ, ಪರಿವರ್ತನೆ ಆಗುವುದು ನನ್ನ ಜವಾಬ್ದಾರಿಯಾಗಿದೆಯೇ? ಎಂದು ಕೇಳುತ್ತೀರಲ್ಲವೇ. ಇನ್ನೊಬ್ಬರದೂ ಜವಾಬ್ದಾರಿಯಿದೆ ಅರ್ಧ ಅರ್ಧ ಹಂಚಿಕೊಳ್ಳಿರಿ. ನೀವು ಇಷ್ಟು ಸಾಯಿರಿ, ನಾನು ಇಷ್ಟು ಸಾಯುವೆನು ಎಂದು ಹೇಳುತ್ತಾರೆ. ಬಾಪ್‌ದಾದರವರಿಗಂತೂ ಆ ಸಮಯದಲ್ಲಿ ತುಂಬಾ ದಯೆಯೂ ಬರುತ್ತದೆ. ಆದರೆ ಈ ಸಾಯುವುದು ಸಾಯುವುದಲ್ಲ. ಈ ಸಾಯುವುದು ಸದಾಕಾಲದವರೆಗೆ ಜೀವಿಸುವುದಾಗಿದೆ. ಸಾಯದಿದ್ದರೆ ಸ್ವರ್ಗ ಸಿಗುವುದಿಲ್ಲ ಎಂದು ಜನರು ಹೇಳುತ್ತಾರಲ್ಲವೇ, ಆ ಸ್ಥೂಲ ಸಾವಿನಿಂದಂತೂ ಸ್ವರ್ಗವು ದೊರೆಯುವುದಿಲ್ಲ. ಆದರೆ ಈ ರೀತಿ ಸಾಯುವುದರಿಂದ ಸ್ವರ್ಗದ ಅಧಿಕಾರವು ಅವಶ್ಯವಾಗಿ ದೊರೆಯುವುದು ಆದ್ದರಿಂದ ಈ ರೀತಿ ಸಾಯುವುದು ಅರ್ಥಾತ್ ಸ್ವರ್ಗಕ್ಕೆ ಅಧಿಕಾರಿಯಾಗುವುದಾಗಿದೆ. ಸಾಯಬೇಕಾಗುತ್ತದೆ, ಸಾಯಬೇಕಾಗುತ್ತದೆ ಎಂದು ಹೆದರಿ ಬಿಡುತ್ತೀರಲ್ಲವೇ. ಸಹನೆ ಮಾಡಬೇಕಾದರೆ ಸಣ್ಣ ಮಾತೂ ದೊಡ್ಡದಾಗಿ ಬಿಡುತ್ತದೆ ವಿಚಾರ ಮಾಡಿರಿ ಯಾವ ಕಳ್ಳನೂ ಅಥವಾ ಡಕಾಯಿತನೂ ಇರುವುದಿಲ್ಲ. ಆದರೆ ಡಕಾಯಿತನು ಇದ್ದಾನೆಂದು ನಿಮ್ಮ ಮನಸ್ಸಿನಲ್ಲಿ ಭಯವು ಬಂದುಬಿಟ್ಟರೆ ಆಗ ಭಯದಿಂದ ಏನಾಗುತ್ತದೆ? ಭಯದಿಂದ ಹೃದಯವು ತಲ್ಲಣಿಸುತ್ತದೆ ಅಥವಾ ಬ್ಲಡ್ ಪ್ರೆಷರ್ (ರಕ್ತದ ಒತ್ತಡವು) ಏರುಪೇರಾಗುತ್ತದೆ. ಭಯದಿಂದ ಹೀಗೆ ಆಗುತ್ತದೆಯಲ್ಲವೇ? ಹೀಗೆ ಹೆದರಿ ಬಿಡುತ್ತೀರಿ, ಸಾಯುವುದು ದೊಡ್ಡ ಸಂಗತಿಯಲ್ಲ. ಆದರೆ ನಿಮ್ಮ ಭಯವು ದೊಡ್ಡ ಸಾಧನೆಯನ್ನಾಗಿ ಮಾಡಿಬಿಡುತ್ತದೆ. ಆಮೇಲೆ ಏನು ಹೇಳುತ್ತೀರೆಂದರೆ ನನಗೆ ಏನಾಗುತ್ತದೆಯೋ ಗೊತ್ತಿಲ್ಲ ಎಂದು ಆದರೆ ಹೇಗೆ ಧೈರ್ಯದಿಂದ ಮರುಜೀವಾ ಆಗುವುದರಲ್ಲಿ ಭಯಪಡದೇ ಖುಷಿ ಖುಷಿಯಿಂದ ಮಾಡಿದಿರೋ ಹಾಗೆಯೇ ಖುಷಿ ಖುಷಿಯಿಂದ ಪರಿವರ್ತನೆ ಮಾಡಿಕೊಳ್ಳಿರಿ. ಸಾಯುವುದು ಎನ್ನುವ ಶಬ್ದವು ಉಚಿತವಲ್ಲ, ಆದರೆ ನೀವು ಸಾಯುವುದು, ಸಾಯುವುದು ಎನ್ನುವ ಶಬ್ದವನ್ನು ಉಪಯೋಗಿಸಿಬಿಟ್ಟಿದ್ದೀರಿ. ಆದ್ದರಿಂದ ಹೆದರಿಬಿಡುತ್ತಾರೆ. ವಾಸ್ತವವಾಗಿ ಇದು ಸಾಯುವುದಲ್ಲ. ಆದರೆ ನಿಮ್ಮ ಧಾರಣೆಯ ಸಬ್ಜೆಕ್ಟ್ ನಲ್ಲಿ ಸ್ಥಾನ ತೆಗೆದುಕೊಳ್ಳುವುದಾಗಿದೆ. ಸಹನೆ ಮಾಡುವುದರಲ್ಲಿ ಗಾಬರಿಯಾಗಬೇಡಿರಿ. ಏಕೆ ಗಾಬರಿಯಾಗುತ್ತೀರಿ? ಏಕೆಂದರೆ ಅಸತ್ಯ ಆರೋಪಣೆಯಲ್ಲಿ ನಾನು ಏಕೆ ಸಹನೆ ಮಾಡಬೇಕು ಎಂದು ಯೋಚಿಸುತ್ತೀರಿ. ಆದರೆ ಸಹನೆ ಮಾಡಿರಿ ಎನ್ನುವ ಆಜ್ಞೆಯನ್ನು ಯಾರು ಕೊಟ್ಟಿದ್ದಾರೆ? ಸುಳ್ಳು ಹೇಳುವವರು ಕೊಟ್ಟಿದ್ದಾರೆಯೇ? ಅನೇಕ ಮಕ್ಕಳು ಸಹನೆ ಮಾಡಿಯೂ ಮಾಡುತ್ತಾರೆ. ಆದರೆ ಪರಿಸ್ಥಿತಿಗೆ ವಶವಾಗಿ ಸಹನೆ ಮಾಡುವುದು ಹಾಗೂ ಪ್ರೀತಿಯಿಂದ ಸಹನೆ ಮಾಡುವುದರಲ್ಲಿ ಅಂತರವಿದೆ. ಅದು ಸತ್ಯವಾದ ಸಂಗತಿಯಾಗಿದೆಯೆಂದು ನೀವು ಸಹನೆ ಮಾಡುತ್ತಿಲ್ಲ. ಆದರೆ ತಂದೆಯ ಆಜ್ಞೆಯಿರುವುದರಿಂದ ಸಹನಶೀಲರಾಗುತ್ತಿದ್ದೀರಿ. ಹೀಗೆ ತಂದೆಯ ಆಜ್ಞೆಯನ್ನು ಪಾಲನೆ ಮಾಡುತ್ತಿದ್ದೀರಿ. ಪರಮಾತ್ಮನ ಆಜ್ಞೆಯನ್ನು ಪಾಲನೆ ಮಾಡುವುದು ಖುಷಿಯ ಸಂಗತಿಯಾಗಿದೆಯಲ್ಲವೇ. ಅಥವಾ ವಿವಶತೆಯಾಗಿದೆಯೋ? ಹೀಗೆ ಅನೇಕಸಲ ಸಹನೆ ಮಾಡಿಯೂ ಮಾಡುತ್ತೀರಿ, ಆದರೆ, ಸ್ವಲ್ಪ ಬೆರಕೆಯಾಗುತ್ತದೆ. ಪ್ರೀತಿಯೂ ಇರುತ್ತದೆ. ವಿವಶತೆಯೂ ಇರುತ್ತದೆ. ಸಹನೆಯಂತೂ ಮಾಡುತ್ತಿದ್ದೀರಿ ಅದನ್ನೇಕೆ ಖುಷಿಯಿಂದ ಮಾಡಬಾರದು, ತಪ್ಪದೇ ಏಕೆ ಮಾಡುತ್ತೀರಿ. ಆ ವ್ಯಕ್ತಿಯು ನಿಮ್ಮ ಮುಂದೆ ಕಾಣಿಸಿಕೊಳ್ಳುವುದರಿಂದ ವಿವಶತೆಯೆನಿಸುತ್ತದೆ. ಆದರೆ ತಂದೆಯು ಎದುರಿನಲ್ಲಿ ಬಂದರೆ, ತಂದೆಯ ಆಜ್ಞೆ ಪಾಲನೆ ಮಾಡುತ್ತಿದ್ದೇನೆ ಎನ್ನುವುದು ನಿಮ್ಮ ಮುಂದೆ ಬಂದರೆ

ಪ್ರೀತಿಯುಂಟಾಗುವುದು, ವಿವಶತೆಯಿರುವುದಿಲ್ಲ. ಆದ್ದರಿಂದ ಈ ಶಬ್ದವನ್ನು ವಿಚಾರ ಮಾಡಬೇಡಿರಿ. ಈಗಿನ ಕಾಲದಲ್ಲಿ ಇದು ಸ್ವಲ್ಪ ಸಾಧಾರಣವಾಗಿ ಬಳಸಲ್ಪಡುತ್ತದೆ - ಸಾಯಬೇಕಾಗುತ್ತದೆ. ಸಾಯಬೇಕಾಗುತ್ತದೆ. ಎಲ್ಲಿಯವರೆಗೆ ಸಾಯಬೇಕಾಗುತ್ತದೆ. ಅಂತ್ಯದವರೆಗೂ ಅಥವಾ ಎರಡು ವರ್ಷ, ಒಂದು ವರ್ಷ, 6 ತಿಂಗಳವರೆಗೋ, ಹಾಗಿದ್ದರೆ ಸತ್ತು ಬಿಡೋಣ... ಆದರೆ ಎಲ್ಲಿಯವರೆಗೆ ಸಾಯುವುದು? ಆದರೆ ಇದು ಸಾಯುವುದಲ್ಲ... ಅಧಿಕಾರ ಪಡೆಯುವುವಾಗಿದೆ. ಹಾಗಾದರೆ ಏನು ಮಾಡುವಿರಿ, ಸಾಯುವಿರಾ? ಈ ಸಾಯುವುದು ಎಂಬ ಮಾತನ್ನು ಸಮಾಪ್ತಿ ಮಾಡಿರಿ ಸಾಯುತ್ತಿದ್ದೇವೆ ಎಂದುಕೊಳ್ಳುತ್ತಿದ್ದೀರಿ ಆದ್ದರಿಂದ ಭಯವೆನಿಸುತ್ತದೆ. ಕೆಲವರಂತೂ ತಮ್ಮ ಮೃತ್ಯುವನ್ನು ಬಿಡಿ, ಅನ್ಯರ ಮೃತ್ಯುವನ್ನು ನೋಡಿಯೂ ಹೆದರಿ ಬಿಡುತ್ತಾರೆ. ಆದ್ದರಿಂದ ಈ ಶಬ್ಧವನ್ನು ಪರಿವರ್ತನೆ ಮಾಡಿಕೊಳ್ಳಿರಿ. ಇಂತಹ ಮಾತನಾಡಬೇಡಿರಿ ಶುದ್ಧ ಭಾಷೆಯನ್ನೇ ಮಾತನಾಡಿರಿ. ಬ್ರಾಹ್ಮಣರ ಡಿಕ್ಷನರಿಯಲ್ಲಿ ಈ ಶಬ್ದವೇ ಇಲ್ಲ. ಯಾರು ಇದನ್ನು ಮೊದಲು ಮಾತನಾಡಿದರೋ ಗೊತ್ತಿಲ್ಲ. ಪ್ರಾರಂಭವಂತೂ ನಿಮ್ಮಲ್ಲಿಯೇ ಯಾರೋ ಒಬ್ಬರು ಮಾಡುತ್ತಾರೆ. ನೀವು ಅರ್ಥಾತ್ ಎದುರಿಗೆ ಕುಂತಿರುವವರೇ ಅಲ್ಲ. ಬ್ರಾಹ್ಮಣರೇ ಪ್ರಾರಂಭಿಸಿದ್ದಾರೆ ಎಂದರ್ಥ. ಬಾಪ್‌ದಾದಾ ಉದಾಹರಣೆಗೆ ಈ ಒಂದು ಮಾತನ್ನು ತಿಳಿಸಿದ್ದಾರೆ ಆದರೆ ದಿನವಿಡೀ ಇಂತಹ ವ್ಯರ್ಥ ಮಾತುಗಳು ಅಥವಾ ಟೈಮ್ ಪಾಸಿನ ಮಾತುಗಳನ್ನು ಬಹಳ ಮಾತನಾಡುತ್ತಿರುತ್ತಾರೆ. ಒಳ್ಳೆಯ ಮಾತುಗಳನ್ನು ಆಡುವುದಿಲ್ಲ, ಮತ್ತೆ ನನ್ನ ಭಾವ ಅದಲ್ಲ ಸುಮ್ಮನೆ ತಮಾಷೆಗೆ ಹೇಳಿದೆ ಎನ್ನುತ್ತಾರೆ. ಇಂತಹ ತಮಾಷೆಯನ್ನು ಮಾಡಿರಿ ಎಂದು ನಿಮ್ಮ ಬ್ರಾಹ್ಮಣ ಜೀವನದ ನಿಯಮದಲ್ಲಿ ಇದೆಯೇ? ಎಲ್ಲಿಯೂ ಬರದಿಲ್ಲವಲ್ಲ. ತಮಾಷೆಯನ್ನು ಮಾಡಬಹುದು ಎಂದು ಎಲ್ಲಿಯಾದರೂ ಓದಿರುವಿರಾ? ತಮಾಷೆಯನ್ನು ಮಾಡಿಕೊಳ್ಳಿ ಆದರೆ ಜ್ಞಾನಯುಕ್ತವಾಗಿ, ಯೋಗಯುಕ್ತವಾಗಿ ಇರಬೇಕು ವ್ಯರ್ಥವಾಗಿ ತಮಾಷೆ ಮಾಡಿಕೊಳ್ಳುವುದನ್ನು ನೀವು ತಮಾಷೆ ಎಂದುಕೊಳ್ಳುತ್ತಿದ್ದೀರಿ ಆದರೆ ಅದರಿಂದ ಅನ್ಯರ ಸ್ಥಿತಿಯು ಏರುಪೇರು ಆಗಿಬಿಡುತ್ತದೆ. ಎಂದಾಗ ಅದು ತಮಾಷೆಯಾಗಿದೆಯೋ ಅಥವಾ ದುಃಖ ಕೊಡುವುದಾಗಿದೆಯೋ?

ಇಂದು ಬಾಪ್‌ದಾದಾರವರು ಏನು ನೋಡಿದರು- 1.ಒಂದನೆಯದಾಗಿ ನೀವು ಎಲ್ಲರೂ ಪೂರ್ವಜರು ಹಾಗೂ 2.ಎರಡನೆಯದಾಗಿ ಎಲ್ಲರಿಗಿಂತಲೂ ಉನ್ನತೋನ್ನತವಾದ ಪೂಜ್ಯ ಆತ್ಮರು ಕೂಡ ನೀವೇ. ಪೂಜ್ಯರೇ ಆದರೆ ನಂಬರ್‌ವಾರ್‌ಆಗಿ ಇದ್ದೀರಿ ಬ್ರಾಹ್ಮಣರಾದವರಿಗೆ ತಪ್ಪದೇ ಪೂಜೆಯಾಗುತ್ತದೆ ಆದರೆ ಕೆಲವರಿಗೆ ವಿಧಿಪೂರ್ವಕವಾದ ಪೂಜೆಯಾಗುತ್ತದೆ. ಇನ್ನು ಕೆಲವರಿಗೆ ಆ ಕಾರ್ಯವಾದರೆ ಸಾಕು ಎಂಬಂತೆ ಪೂಜೆಯಾಗುತ್ತದೆ. ಇಲ್ಲಿ ಕೂಡ ಬ್ರಾಹ್ಮಣರು ಯೋಗದಲ್ಲಿ ಕುಳಿತುಕೊಂಡಾಗ ಕೆಲಸವಾಯಿತು ಎಂದುಕೊಳ್ಳುತ್ತಾರೆ. ಸ್ವಲ್ಪ ನಿದ್ದೆ ಮಾಡುತ್ತಾರೆ, ಸ್ವಲ್ಪ ಯೋಗ ಮಾಡುತ್ತಾರೆ, ಸ್ವಲ್ಪ ವ್ಯರ್ಥವನ್ನು ಯೋಚಿಸುತ್ತಾರೆ, ಸ್ವಲ್ಪ ಶುಭ ಯೋಚಿಸುತ್ತಾರೆ ಇದು ಕೆಲಸವಾಗಲು ಮಾಡುವುದು ತಾನೇ? ಹಾಗೆಯೇ ಅಲ್ಲಿ ಕೂಡ ಹಾರತಿ, ಕರ್ಪೂರವನ್ನು ಹಚ್ಚುತ್ತಾರೆ ಕಾರ್ಯವಾಯಿತು ಎಂದುಕೊಳ್ಳುತ್ತಾರೆ. ಹಾಗೆಯೇ ಧಾರಣೆಯಲ್ಲಿ ಕೂಡ ಬಹಳ ಜನ ಕೆಲಸ ಆಗುವುದೇ ನೋಡಿಕೊಳ್ಳುತ್ತಾರೆ. ಯಾವುದಾದರೂ ಪರಿಸ್ಥಿತಿ ಬಂದರೆ ಈಗ ಏನು ಮಾಡಬೇಕು? ಸಧ್ಯಕ್ಕೆ ಇದನ್ನು ಮಾಡಿಬಿಡಿ ಅನಂತರ ನೋಡೋಣ ಎನ್ನುತ್ತಾರೆ. ಅಂತವರ ಪೂಜೆ ಕೂಡ ಕಾರ್ಯವಾಗಲು ಮಾತ್ರ ಮಾಡುತ್ತಾರೆ. ಕೆಲವು ಲಕ್ಷಗಳ ಸಾಲಿಗ್ರಾಮಗಳನ್ನು ತಯಾರು ಮಾಡುತ್ತಾರೆ ಆದರೆ ಏನು ಮಾಡುತ್ತಾರೆ

ವಿಧಿಪೂರ್ವಕ ಪೂಜೆಯಾಗುತ್ತದೆಯೇ? ಕಾರ್ಯವಾಗಲು ಮಾಡುತ್ತಾರೆ. ಒಂದು ಪೈಪಿನಿಂದ ಸ್ನಾನ ಮಾಡಿಸುತ್ತಾರೆ. ತಿಲಕ ಕೂಡ ಒಂದು ಬಟ್ಟಲನ್ನು ತುಂಬಿಕೊಂಡು ಚಿಮ್ಮಿಸುತ್ತಾರೆ. ಕಾರ್ಯವಾಗಲು ಮಾಡಿದ ಹಾಗೆ ಅಲ್ಲವೇ ಪೂಜ್ಯರಂತೂ ಎಲ್ಲರೂ ಆಗುತ್ತೀರಿ. ಆದರೆ ಎಂತಹ ಪೂಜ್ಯರಾಗುತ್ತೀರೆಂದರೆ ನಂಬರ್‌ವಾರ್ ಆಗುತ್ತೀರಿ. ಒಬ್ಬೊಬ್ಬರದು ಪ್ರತಿಯೊಂದು ಕರ್ಮದ ಪೂಜೆ ಆಗುತ್ತದೆ. ಹಲ್ಲುಜ್ಜುವ ದರ್ಶನವೂ ಮಾಡಿಸಲ್ಪಡುತ್ತದೆ. ಮಥುರಾದಲ್ಲಿ ಹೋದರೆ ಹಲ್ಲುಜ್ಜುವ ಕ್ರಿಯೆಯು ನಡೆಯುತ್ತಾ ಇರುತ್ತದೆ. ಹಲ್ಲುಜ್ಜುವ ದರ್ಶನವನ್ನೂ ಮಾಡಿಸುತ್ತಾರೆ. ಈ ಸಮಯವು ಹಲ್ಲುಜ್ಜುವ ಸಮಯವಾಗಿದೆ. ಆದ್ದರಿಂದ ಕಾರ್ಯವು ನಡೆದು ಹೋದರೆ ಸಾಕು ಎಂದು ಮಾಡುವವರಾಗಬೇಡಿರಿ. ಇಲ್ಲದಿದ್ದರೆ ನಿಮ್ಮ ಪೂಜೆಯೂ ಸಹ ಹಾಗೆಯೇ ಆಗುತ್ತದೆ.

ಒಳ್ಳೆಯದು - ಎಲ್ಲಾ ಶಿಕ್ಷಕಿಯರೂ ಖುಷಿಯಾಗಿದ್ದೀರಾ? ಅಥವಾ ಯಾವ ಯಾವುದೋ ಇಚ್ಛೆಯು ಇನ್ನೂ ಮನಸ್ಸಿನಲ್ಲಿ ಇದೆಯೋ? ಯಾವುದಾದರೂ ಇಚ್ಛೆಯು ಇದ್ದರೆ. ಅದು ಉತ್ತಮವಾಗಲು ಅವಕಾಶ ಕೊಡುವುದಿಲ್ಲ. ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳಿರಿ ಅಥವಾ ಉತ್ತಮರಾಗಿರಿ. ಇದು ನಿಮ್ಮ ಕೈಯಲ್ಲಿ ಇದೆ. ಹಾಗೂ ಏನು ನೋಡಲಾಗುತ್ತದೆಯೆಂದರೆ, ಈ ಇಚ್ಛೆಯೂ ಎಂತಹ ವಸ್ತುವಾಗಿದೆಯೆಂದರೆ, ಹೇಗೆ ಬಿಸಿಲಿನಲ್ಲಿ ನೀವು ನಡೆಯುತ್ತಿರುವಾಗ ನಿಮ್ಮ ನೆರಳು ಮುಂದೆ ಹೋಗುತ್ತಿರುತ್ತದೆ. ನೀವು ಅದನ್ನು ಹಿಡಿದುಕೊಳ್ಳುವ ಪ್ರಯತ್ನ ಮಾಡಿದರೆ ಅದು ಸಿಗುತ್ತದೆಯೇ? ಆದರೆ ನೀವು ಅದಕ್ಕೆ ಬೆನ್ನು ತಿರುಗಿಸಿ ಬಂದರೆ ಆ ನೆರಳು ಎಲ್ಲಿ ಹೋಗುವುದು? ನಿಮ್ಮ ಹಿಂದೆ ಹಿಂದೆಯೇ ಬರುವುದು, ಹಾಗೆಯೇ ಇಚ್ಛೆಯು ತನ್ನ ಕಡೆ ಆಕರ್ಷಣೆ ಮಾಡಿ 'ಗೋಳಾಡಿಸುವುದಾಗಿದೆ. ಆದರೆ ಇಚ್ಛೆಯನ್ನು ತ್ಯಜಿಸಿಬಿಟ್ಟರೆ ಇಚ್ಛೆಯು ನಿಮ್ಮ ಹಿಂದೆ ಹಿಂದೆ ಹಿಂಬಾಲಿಸುವುದು ಬೇಡುವವರು ಎಂದೂ ಸಂಪನ್ನರಾಗಲು ಸಾಧ್ಯವಾಗುವುದಿಲ್ಲ ನೀವು ಬೇರೆ ಏನೂ ಬೇಡುವುದಿಲ್ಲ. ಆದರೆ ರಾಯರ್ ಬೇಡಿಕೆಗಳು ಅನೇಕವಿದೆ ರಾಯಲ್ ಬೇಡಿಕೆಗಳು ಏನಾಗಿವೆ ಎಂಬುದನ್ನು ತಿಳಿದುಕೊಂಡಿದ್ದೀರಲ್ಲವೇ? ಅಲ್ಪಕಾಲದ ಹೆಸರು ಕೀರ್ತಿಯು ಸಿಕ್ಕಿಬಿಡಲಿ. ಸ್ವಲ್ಪ ಮಾನ್ಯತೆ, ಸನ್ಮಾನವು ದೊರೆತುಬಿಡಲಿ. ಯಾವಾಗಲಾದರೂ ನನ್ನ ಹೆಸರೂ ಸಹ ಹಿರಿಯ ಸಹೋದರಿಯರಲ್ಲಿ ಪರಿಗಣಿಸಲ್ಪಡಲಿ, ಕನಿಷ್ಠಪಕ್ಷ ನನಗೂ ಸಹ ಅವಕಾಶವು ದೊರೆಯಬೇಕು. ಎಂದು ಬೇಡುತ್ತೀರಿ ಆದರೆ ಎಲ್ಲಿಯವರೆಗೆ ಬೇಡುವವರಾಗಿರುತ್ತೀರೋ ಅಲ್ಲಿಯವರೆಗೆ ಎಂದಿಗೂ ಖುಷಿಯ ಖಜಾನೆಯಿಂದ ಸಂಪನ್ನರಾಗಲು ಸಾಧ್ಯವಾಗುವುದಿಲ್ಲ. ಹೀಗೆ ಬೇಡಿಕೆಯ ಬೆನ್ನುಹತ್ತುವುದು ಅಥವಾ ಯಾವುದಾದರೂ ಅಲ್ಪಕಾಲದ ಇಚ್ಛೆಗಳ ಬೆನ್ನು ಹತ್ತುವುದು ಮೃಗತೃಷ್ಣದ ಸಮಾನ ಆಗಿದೆಯೆಂಬುದನ್ನು ತಿಳಿದುಕೊಳ್ಳಿರಿ. ಇದರಿಂದ ಸದಾ ದೂರವಿರಿ ಸಣ್ಣವರಾಗಿರುವುದೇನೋ ಕೆಟ್ಟದ್ದಲ್ಲ ಸಣ್ಣವರು ಭಗವಂತನ ಸಮಾನ ಆಗಿದ್ದಾರೆ. ಏಕೆಂದರೆ, ಬಾಪ್‌ದಾದಾರ ಹೃದಯ ಸಿಂಹಾಸನದ ಮೇಲಿನ ಸ್ಥಾನವು ಮುಂದೆ ಇದೆ ಅಲ್ಪಕಾಲದ ಇಚ್ಛೆಯ ಅನುಭವ ನೋಡಿರಬಹುದು. ಅದು ನಿಮ್ಮನ್ನು ಅಳಿಸುವುದಾಗಿದೆಯೋ ಅಥವಾ ನಗಿಸುವುದಾಗಿದೆಯೋ? ಗೋಳಾಡಿಸುತ್ತದೆಯಲ್ಲವೇ ರಾವಣನ ಆಜ್ಞೆಯು ಗೋಳಾಡಿಸುವುದಾಗಿದೆ. ನೀವಂತೂ ಪರಮಪಿತನ ಮಕ್ಕಳಾಗಿದ್ದೀರಲ್ಲವೇ. ಹಾಗಾದರೆ ತಂದೆಯು ನಗಿಸುವವರೋ ಅಥವಾ ಅಳಿಸುವವರಾಗಿದ್ದಾರೋ?

ಇಂದು ಬಾಪ್‌ದಾದಾರವರು ವಿಶೇಷವಾಗಿ ಯಾವುದರ ಬಗ್ಗೆ ಗಮನವನ್ನು ಸೆಳೆಯುತ್ತಿದ್ದಾರೆ ಎಂದರೆ - ವ್ಯರ್ಥಮಾತು ಯಾರಿಗೂ ಹಿತವೆನಿಸುವುದಿಲ್ಲ. ನಿಮಗೆ ಹಿತವೆನಿಸಬಹುದು ಆದರೆ ಅನ್ಯರಿಗೆ ಇಷ್ಟವಾಗುವುದಿಲ್ಲ. ಆದ್ದರಿಂದ ಸದಾಕಾಲದವರೆಗೆ ಆ ಶಬ್ದವನ್ನು ಸಮಾಪ್ತಿ ಮಾಡಿಬಿಡಿ. ಇಡೀ ದಿನದಲ್ಲಿ ಒಂದುವೇಳೆ ಬಾಪ್‌ದಾದಾರವರು ನಮ್ಮ ಬಳಿ ಮಕ್ಕಳ ಮಾತುಗಳನ್ನು ಟಿಪ್ಪಣಿ ಮಾಡಿಕೊಂಡರೆ ಸಾಕಷ್ಟು ಫೈಲ್ ಆಗಬಹುದು ಈ ಅಪಶಬ್ದಗಳು, ವ್ಯರ್ಥವಾದ ಶಬ್ದಗಳು, ಜೋರಾಗಿ ಮಾತನಾಡುವುದು, ಈ ಜೋರಾಗಿ ಮಾತನಾಡುವುದೂ ಸಹ ವಾಸ್ತವವಾಗಿ ಅನೇಕರನ್ನು ಡಿಸ್ಟರ್ಬ್ ಮಾಡುತ್ತದೆ. ನನ್ನ ಧ್ವನಿಯೇ ಘಟ್ಟಿಯಾಗಿದೆ ಎಂದು ಹೇಳಬೇಡಿರಿ. ಮಾಯಾಜೀತ್‌ಆಗಬಲ್ಲಿರಿ ಆದರೆ ಶಬ್ದವನ್ನು ಜಯಿಸುವವರು ಆಗಲು ಸಾಧ್ಯವಿಲ್ಲವೇ. ಆದ್ದರಿಂದ ಇಂತಹ ಯಾರನ್ನಾದರೂ ವಿಚಲಿತರನ್ನಾಗಿ ಮಾಡುವ ಮಾತನ್ನು, ವ್ಯರ್ಥವಾದ ಮಾತುಗಳನ್ನೂ ಆಡಬೇಡಿರಿ. ಎರಡು ಶಬ್ದಗಳ ಮಾತಾಗಿದ್ದರೂ ಅರ್ಧ ಘಂಟೆಯವರೆಗೆ ಆ ವಿಚಾರದ ಬಗ್ಗೆ ಮಾತನಾಡುತ್ತಾ ಇರುತ್ತಾರೆ. ಹೇಳುತ್ತಾ ಇರುತ್ತಾರೆ. ಹೀಗೆ ಯಾವ ಮಾತನ್ನು ಬೆಳೆಸುತ್ತೀರೋ, ಯಾವ ಕಾರ್ಯವು ನಾಲ್ಕು ಶಬ್ದಗಳಲ್ಲಿ ಆಗಲು ಸಾಧ್ಯವಿದೆಯೋ ಅದನ್ನು 12-15 ಶಬ್ದಗಳಲ್ಲಿ ವಿಸ್ತಾರ ಮಾಡಿ ಹೇಳಬೇಡಿರಿ. ನಿಮ್ಮ ಸ್ಲೋಗನ್ ಏನಿದೆಯೆಂದರೆ ಕಡಿಮೆ ಮಾತನಾಡಿ, ಮೆಲ್ಲಗೆ ನಿಧಾನವಾಗಿ ಮಾತನಾಡಿರಿ ಎಂದು. ನಾನು ಮೆಲ್ಲಗೆ ಮಾತನಾಡಬೇಕೆಂದು ಬಯಸುತ್ತೇನೆ, ಆದರೆ ನನ್ನ ಧ್ವನಿಯೇ ತುಂಬಾ ಗಟ್ಟಿಯಾಗಿದೆ ಎಂದು ಯಾರು ಹೇಳುತ್ತಾರೋ ಅವರು ಕೊರಳಿನಲ್ಲಿ ಒಂದು ಸ್ಲೋಗನ್ ಹಾಕಿಕೊಂಡುಬಿಡಲಿ. ಏನಾಗುತ್ತದೆಯೆಂದರೆ, ನೀವು ನಿಮ್ಮ ಗುಂಗಿನಲ್ಲಿ ಜೋರಾಗಿ ಮಾತನಾಡುತ್ತೀರಿ. ಆದರೆ ಬರುವವರು ಹೋಗುವವರು ಇದನ್ನು ಕೇಳಿ ಇವರ ಧ್ವನಿಯೇ ಗಟ್ಟಿಯಾಗಿದೆ ಎಂದು ತಿಳಿದುಕೊಳ್ಳುವುದಿಲ್ಲ. ಇವರಲ್ಲಿ ಪರಸ್ಪರ ಜಗಳವು ನಡೆಯುತ್ತಾ ಇದೆಯೆಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಇದೂ ಸಹ ಡಿಸ್-ಸರ್ವಿಸ್ ಆಯಿತು, ಆದ್ದರಿಂದ, ಈ ದಿನ ಧ್ವನಿಯ ಪಾಠವನ್ನು ಕಲಿಸುತ್ತಿದ್ದಾರೆ. ವ್ಯರ್ಥವಾದ ಮಾತು ಅಥವಾ ಯಾರನ್ನೂ ಡಿಸ್ಟರ್ಬ್ ಮಾಡುವ ಮಾತನ್ನು ಆಡಬೇಡಿರಿ. ಅದರಿಂದ ನಿಮ್ಮನ್ನು ಮುಕ್ತರನ್ನಾಗಿ ಮಾಡಿಕೊಳ್ಳಿರಿ. ವ್ಯರ್ಥವಾದ ಮಾತಿನಿಂದ ಮುಕ್ತರಾಗಿರಿ. ಆಮೇಲೆ ಅವ್ಯಕ್ತ ಫರಿಶ್ತಾ (ಸೂಕ್ಷ್ಮದೇವತೆ) ಆಗುವುದರಲ್ಲಿ ನಿಮಗೆ ತುಂಬಾ ನೆರವು ದೊರೆಯುವುದನ್ನು ಅನುಭವ ಮಾಡುವಿರಿ. ಮಾತು, ಮಾತು. ಮಾತು, ಮಾತನಾಡುತ್ತಲೇ ಇರುತ್ತೀರಿ. ಒಂದುವೇಳೆ ಬಾಪ್‌ದಾದಾರವರು ಟೇಪ್ನಲ್ಲಿ ಧ್ವನಿಮುದ್ರಿಕೆ(ರೆಕಾರ್ಡ್) ಮಾಡಿ ನಿಮಗೆ ಕೇಳಿಸಿದರೆ ನಿಮಗೂ ಸಹ ನಗು ಬರುವುದು. ಆದ್ದರಿಂದ ಯಾವ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೀರಿ? ಮಾತನಾಡುವುದರಲ್ಲಿ ಉಳಿತಾಯ(ಎಕಾನಮಿ)ಮಾಡಿ. ನಿಮ್ಮ ನುಡಿಯ ಮೌಲ್ಯವನ್ನು ಇಟ್ಟುಕೊಳ್ಳಿರಿ. ಹೇಗೆ ಮಹಾತ್ಮರಿಗೆ ಸತ್ಯವಚನ ಮಹಾರಾಜ್ ಎಂದು ಹೇಳುತ್ತಾರಲ್ಲವೇ. ಹಾಗೆಯೇ ನಿಮ್ಮ ನುಡಿಯು ಸದಾ ಸತ್ಯವಚನ ಅರ್ಥಾತ್ ಏನಾದರೊಂದು ಪ್ರಾಪ್ತಿ ಮಾಡಿಸುವ ನುಡಿಯಾಗಿರಬೇಕು. ಯಾರನ್ನಾದರೂ ಇವರಂತೂ ತಿಳಿವಳಿಕೆಯಿಲ್ಲವರಾಗಿದ್ದಾರೆ, ಹುಚ್ಚರಾಗಿದ್ದಾರೆಂದು ತಮಾಷೆಯಲ್ಲಿ ಒಮ್ಮೊಮ್ಮೆ ಹೇಳಿಬಿಡುತ್ತೀರಿ. ಇಂತಹ ಅನೇಕ ಶಬ್ದಗಳನ್ನು ಬಾಪ್‌ದಾದಾರವರು ಈಗ ಮರೆತುಬಿಟ್ಟಿದ್ದಾರೆ. ಆದರೆ ಕೇಳುತ್ತಾರೆ. ಬ್ರಾಹ್ಮಣರ ಬಾಯಿಯಿಂದ ಇಂತಹ ಶಬ್ದಗಳು ಹೊರಬರುವುದು ಸತ್ಯವಚನ ಮಹಾರಾಜ್ ಆಗಿದೆಯೇ. ನೀವು ಯಾರಿಗೋ ಶಾಪ ಕೊಡುವುದಾಗಿದೆಯೆಂದು ತಿಳಿದುಕೊಳ್ಳಿರಿ. ಯಾರನ್ನೂ ಶಾಪಗ್ರಸ್ತರನ್ನಾಗಿ ಮಾಡಬೇಡಿರಿ. ಸುಖವನ್ನು ಕೊಡಿ, ಯುಕ್ತಿಯುಕ್ತವಾದ ಮಾತನಾಡಿರಿ, ಹಾಗೂ ಕೆಲಸಕ್ಕೆ ಬರುವಂತಹುದನ್ನು ಕೇಳಿರಿ, ವ್ಯರ್ಥವಾದ ಮಾತನ್ನು ನುಡಿಯಬೇಡಿರಿ. ಹೀಗೆ ಯಾವಾಗ ಮಾತನಾಡಲು

ಪ್ರಾರಂಭ ಮಾಡುತ್ತೀರೋ ಅಮೇಲೆ ಒಂದು ಘಂಟೆಯಲ್ಲಿ ಎಷ್ಟು ಮಾತು ವ್ಯರ್ಥವಾದವು ಬಂದವೆಂದೂ ಎಷ್ಟು ಸತ್ಯವಚನ ಆದವೆಂದೂ ನೋಡಿಕೊಳ್ಳಿರಿ. ನಿಮಗೆ ನಿಮ್ಮ ಮೌಲ್ಯದ ಅರಿವಿಲ್ಲ. ಆದ್ದರಿಂದ ನುಡಿಯ ಮೌಲ್ಯವನ್ನು ಅರಿತುಕೊಳ್ಳಿರಿ. ಅಪಶಬ್ಧವನ್ನು ನುಡಿಯಬೇಡಿರಿ, ಶುಭಶಬ್ದವನ್ನು ನುಡಿಯಿರಿ. ಏಕೆಂದರೆ ಇದು ಕಡೆಯ ತಿಂಗಳು ಮತ್ತು ಮೊದಲ ತಿಂಗಳಿನಲ್ಲಿ ಡೈಮಂಡ್ ಜುಬ್ಲಿ ಇರುತ್ತದೆ, ಇಡೀ ವರ್ಷವೆಲ್ಲವೂ ಡೈಮಂಡ್ ಆಗುತ್ತೀರಾ ಅಥವಾ ಆರು ತಿಂಗಳು ಮಾತ್ರ ಆಗುತ್ತೀರಾ? ಇಡೀ ವರ್ಷ ಡೈಮಂಡ್ ಆಗುತ್ತೀರಲ್ಲವೇ? ಆದ್ದರಿಂದ ಬಾಪ್‌ದಾದಾ ಡೈಮಂಡ್ ಜುಬ್ಲಿಗೆ ಮೊದಲೇ ಮಕ್ಕಳಿಗೆ ವಿಶೇಷ ಗಮನವನ್ನು ಕೊಡಿಸುತ್ತಿದ್ದಾರೆ. ಬಾಪ್‌ದಾದಾ ನಾಲ್ಕು ಕಡೆಯ ದೃಶ್ಯವನ್ನು ನೋಡುತ್ತಲೇ ಇರುತ್ತಾರೆ. ದಿನವಿಡೀ ನೋಡುತ್ತಾ ಇರುವುದಿಲ್ಲ, ಕ್ಷಣದಲ್ಲಿ ಎಲ್ಲವನ್ನು ನೋಡಬಲ್ಲರು. ಹಾಗಾದರೆ ಪಾಠ ಪಕ್ಕಾ ಆಗಿದೆಯೇ? ಮುಕ್ತರಾಗಬೇಕಲ್ಲವೇ? ಅಥವಾ ಸ್ವಲ್ಪ ಸ್ವಲ್ಪ ಯುಕ್ತರಾಗಿ ಸ್ವಲ್ಪ ಸ್ವಲ್ಪ ಮುಕ್ತರಾಗಿದ್ದೀರಾ? ಪ್ರತಿಯೊಬ್ಬರೂ ಸ್ವಯಂ ಅನ್ನು ನೋಡಿಕೊಳ್ಳಿರಿ. ತಂದೆಯು ವಾಣಿಯಲ್ಲಿ ತಿಳಿಸಿದ ನಂತರವೂ ಇವರು ಮಾತನಾಡಿ ಬಿಡುತ್ತಿದ್ದಾರೆ ಎಂದು ಅನ್ಯರನ್ನು ನೋಡಬೇಡಿರಿ. ನಾನು ತಂದೆಯ ಶ್ರೀಮತವನ್ನು ಎಷ್ಟು ಪಾಲಿಸುತ್ತಿದ್ದೇನೆ ಎಂದು ಸ್ವಯಂ ಅನ್ನು ನೋಡಿಕೊಳ್ಳಿರಿ. ಅವರು ಅದನ್ನು ಮಾಡುತ್ತಿದ್ದಾರೆ.... ಎಂದು ಈಗ ಒಬ್ಬರನ್ನು ಒಬ್ಬರು ನೋಡಿಕೊಳ್ಳುತ್ತಿದ್ದೀರಿ ಮತ್ತು ಅಧಿಕಾರ ಲಭಿಸುವ ಸಮಯದಲ್ಲಿ ಅವರು ಚಿಕ್ಕ ಪದವಿಯನ್ನು ಪಡೆದರೆ ಆ ಸಮಯದಲ್ಲಿ ನೀವು ಕೂಡ ಅವರ ಹಿಂದೆ ಹೋಗುತ್ತೀರಾ? ಆ ಸಮಯದಲ್ಲಿ ಅವರನ್ನು ನೋಡುತ್ತೀರಾ? ಆಗ ನೋಡುವುದಿಲ್ಲ ತಾನೇ ಮತ್ತೆ ಈಗೇಕೆ ನೋಡುತ್ತಿರುವಿರಿ? ಒಳ್ಳೆಯದು.

ಎಲ್ಲರೂ ಮುಕ್ತರಾಗುವಿರಲ್ಲವೇ? ಎಲ್ಲರಿಗೂ ಪಾಠವು ನೆನಪಿದೆಯೇ? ಯಾವ ಪಾಠ, ವ್ಯರ್ಥ ಮಾತಿನಿಂದ ಮುಕ್ತ... ನೆನಪಿದೆಯೇ? ಮರೆತುಬಿಟ್ಟಿಲ್ಲ ತಾನೇ? ಯಾರು ಮುಕ್ತರಾಗಲು ಕಷ್ಟ ಎನ್ನುತ್ತೀರೋ ಅವರು ಕೈಯನ್ನೆತ್ತಿರಿ. ಇಷ್ಟಕ್ಕೆ ಮುಂಚೆ ಕೂಡ ಚೀಟಿ ಬರೆದು ಕೊಡಲು ತಿಳಿಸಿದ್ದೇನೆ ಆದರೆ ಬಾಪ್‌ದಾದಾರವರಂತೂ ಮಕ್ಕಳಿಗೆ ಶುಭಾಶಯಗಳೊಂದಿಗೆ ಧೈರ್ಯವನ್ನು ಕೂಡ ಕೊಡುತ್ತಿದ್ದಾರೆ. ಕೆಲವರು ಆರು ತಿಂಗಳು ಬೇಕು, ಕೆಲವರು ಎರಡು ತಿಂಗಳು ಬೇಕು ಎಂದು ಬರೆದಿದ್ದಾರೆ. ಎಷ್ಟು ಬೇಕು ಎಂದು ಬರೆದಿದ್ದಾರೆಯೋ ಅಷ್ಟು ಸಿಗುತ್ತದೆ. ಏಕೆಂದರೆ ಸತ್ಯವನ್ನು ನುಡಿದಿದ್ದಾರಲ್ಲವೇ. ಒಳ್ಳೆಯದು.

ಈಗ ಒಂದು ತಿಂಗಳಲ್ಲಿ ಕೂಡ ಅರ್ಧ ಸಮಯವಾಗಿಬಿಟ್ಟಿದೆ. ಇನ್ನೂ ಸ್ವಲ್ಪ ದಿನಗಳು ಉಳಿದಿವೆ ಆದ್ದರಿಂದ ತಪ್ಪದೇ ಮುಕ್ತರಾಗಬೇಕು. ಕಡಿಮೆಯಲ್ಲಿ ಕಡಿಮೆ ಮೊದಲ ಅಥವಾ ಎರಡನೇ ನಂಬರಿನ ಉನ್ನತ ಕುಟುಂಬದಲ್ಲಾದರೂ ಬನ್ನಿರಿ. ಒಳ್ಳೆಯದು, ಈ ಕಲ್ಪದಲ್ಲಿ ಮೊದಲ ಬಾರಿ ಬಂದಿರುವವರು ಎಲ್ಲರೂ ನಾವು ತೀವ್ರ ಪುರುಷಾರ್ಥಿಯಾಗಿ ನಮ್ಮ ಜೀವನ ಮತ್ತು ಸೇವೆಯಲ್ಲಿ ಡೈಮಂಡ್ ಜುಬ್ಲಿ ಆಚರಿಸಿಕೊಳ್ಳುತ್ತೇವೆ ಎಂಬ ಧೈರ್ಯವಿದೆಯೇ? ನಾವು ತಂದೆಗೆ ಮಾಡಿ ತೋರಿಸುತ್ತೇವೆ ಎಂಬುವವರು ಕೈಯನ್ನೆತ್ತಿರಿ. ಮೊದಲು ಹೊಸಬರು ಡೈಮಂಡ್ ಜುಬ್ಲಿ ಕೊನೆಯಲ್ಲಿ ಮಾಡುತ್ತೇವೆ ಎನ್ನುವವರು ಕೈಯನ್ನೆತ್ತಿರಿ. ನಾಚಿಕೆ ಬೇಡ, ಕೈಯನ್ನು ಎತ್ತುವುದರಲ್ಲಿ ಸ್ವಲ್ಪ ಸಂಕೋಚಿಸುತ್ತಿದ್ದೀರಿ ಆದರೆ ಬಾಪ್‌ದಾದಾ ಅಂತಹವರಿಗೆ ಕೂಡ ಹೇಳುತ್ತಿದ್ದಾರೆ. ಧೈರ್ಯ ಮಾಡಲಾಗುವುದಿಲ್ಲವೇ? ಧೈರ್ಯವಿಡಿ. ಧೈರ್ಯ ಇದ್ದರೆ ಸ್ವಲ್ಪ ಸಮಯದಲ್ಲಿ ಕೂಡ ಮುಂದಕ್ಕೆ ಹೋಗಿಬಿಡಬಹುದು ಆದ್ದರಿಂದ ಆಗುತ್ತೇವೆಯೋ, ಇಲ್ಲವೋ, ಎಂದು ಬಲಹೀನವಾಗಬೇಡಿರಿ. ಒಳ್ಳೆಯದು.

**ನಾಲ್ಕೂ ಕಡೆಯ ಪೂರ್ವಜ ಆತ್ಮರಿಗೆ, ಸದಾ ಈ ನಿಶ್ಚಯ ಹಾಗೂ ನಶೆಯಲ್ಲಿ ಇರುವ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಶ್ರೀಮತದ ಅನುಸಾರವಾಗಿ ಪ್ರತಿಯೊಂದು ಕರ್ಮವನ್ನು ಮಾಡುವ ಕರ್ಮಯೋಗೀ ಆತ್ಮರಿಗೆ, ಸದಾ ದೃಢ ಸಂಕಲ್ಪದಿಂದ ತಂದೆಯ ಪ್ರತಿಯೊಂದು ಹಜ್ಜೆಯ ಮೇಲೆ ಹೆಜ್ಜೆಯಿಡುವ, ತಂದೆಯನ್ನು ಅನುಕರಣೆ ಮಾಡುವ ಮಕ್ಕಳಿಗೆ ತುಂಬಾ ತುಂಬಾ ನೆನಪು - ಪ್ರೀತಿ ಹಾಗೂ ನಮಸ್ತೆ, ಡಬಲ್ ವಿದೇಶಿಯರಿಗೆ ಡಬಲ್ ನಮಸ್ತೆ.**

ರಿವೈಸ್ ಕೋರ್ಸ್ 13-12-1995.

***ವ್ಯರ್ಥ ಮಾತು, ಡಿಸ್ಟರ್ಬ್ ಮಾಡುವ ಮಾತುಗಳಿಂದ ಸ್ವಯಂ ಅನ್ನು ಮುಕ್ತರನ್ನಾಗಿ ಮಾಡಿಕೊಂಡು, ಮಾತಿನ ಉಳಿತಾಯ ಮಾಡಿರಿ.***

ವ್ಯರ್ಥ ಮಾತುಗಳು ಅಥವಾ ಯಾರನ್ನಾದರೂ ಡಿಸ್ಟರ್ಬ್ ಮಾಡುವ ಮಾತುಗಳಿಂದ ಸ್ವಯಂ ಅನ್ನು ಮುಕ್ತರನ್ನಾಗಿ ಮಾಡಿಕೊಳ್ಳಿರಿ ಆಗ ಅವ್ಯಕ್ತ ಫರಿಶ್ತಾ(ಸೂಕ್ಷ್ಮ ದೇವತೆ) ಆಗುವುದರಲ್ಲಿ ಎಷ್ಟು ನೆರವು ಸಿಗುತ್ತದೆಯೋ ನೋಡಿರಿ. ಮಾತು, ಮಾತನಾಡುತ್ತಲೇ ಇರುತ್ತೀರಿ. ಅವುಗಳನ್ನು ಬಾಪ್‌ದಾದಾ ಟೇಪ್ನಲ್ಲಿ ನಿಮಗೆ ಕೇಳಿಸಿದರೆ ನೀವು ಕೂಡ ನಗುತ್ತೀರಿ. ಹಾಗಾದರೆ ಯಾವ ಮಾತನ್ನು ಪಕ್ಕಾ ಮಾಡಿಕೊಳ್ಳುತ್ತೀರಿ. ಮಾತನ್ನು ಉಳಿತಾಯ ಮಾಡಿರಿ. ನಿಮ್ಮ ಮಾತಿನ ಮೌಲ್ಯವನ್ನು ಇಟ್ಟುಕೊಳ್ಳಿರಿ. ಸತ್ಯವಚನ ಮಹಾರಾಜ ಎಂದು ಮಹಾತ್ಮರನ್ನು ಕರೆಯುತ್ತಾರೆ ಹಾಗೆಯೇ ನಿಮ್ಮ ಮಾತು ಕೂಡ ಸದಾ ಸತ್ಯವಚನವಾಗಿ ಎಂದರೆ ಯಾವುದೋ ಒಂದು ಪ್ರಾಪ್ತಿಯನ್ನು ಕೊಡುವಂತೆ ಇರಬೇಕು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮನುಷ್ಯಾತ್ಮರೆಲ್ಲರಿಗೂ ಪೂರ್ವಜನು ಮತ್ತು ಬುನಾದಿಯಾಗಿದ್ದೇನೆ.

2. ನಾನು ಸದಾ ಮತ್ತು ಸ್ವತಃವಾಗಿ ತಂದೆಯ ಹೃದಯ ಸಿಂಹಾಸನಾಧಿಕಾರಿಯಾಗಿ ಆದಿಯಿಂದ ಅಂತಿಮದವರೆಗೆ ಸ್ವಪ್ನದಲ್ಲಿ, ಸಂಕಲ್ಪದಲ್ಲಿ ಕೂಡ ಅಪವಿತ್ರತೆಯನ್ನು ಮುಟ್ಟದೇ ನಾಲ್ಕು ಸಬ್ಜೆಕ್ಟ್‌ಗಳಲ್ಲಿ ಒಳ್ಳೆಯ ಅಂಕಗಳನ್ನು ಪಡೆದು ಪಾಸ್ ವಿತ್ ಆನರ್ ಆಗಿರುವ ಸಿಂಹಾಸನಾಧಿಕಾರಿ.

3. ನಾನು ಎಂತಹ ಪರಿಸ್ಥಿತಿಯಲ್ಲಿ ಎಷ್ಟು ಬಾರಿ ಸಹಿಸಬೇಕಾಗಿ ಬಂದರೂ ತಂದೆಯ ಆಜ್ಞೆಯನ್ನು ಪಾಲಿಸುತ್ತಿದ್ದೇನೆ ಎಂದು ತಿಳಿದು ಪ್ರೀತಿಯಿಂದ ಸಹಿಸಿ ಅಧಿಕಾರವನ್ನು ಪಡೆದಿದ್ದೇನೆ.

4. ನಾನು ವಿಧಿ ಪೂರ್ವಕ ಉನ್ನತೋನ್ನತ ಪೂಜೆಯನ್ನು ಪಡೆಯುವ ಪೂಜ್ಯ ಸ್ವರೂಪ.

5. ನಾನು ಎಲ್ಲಾ ಇಚ್ಛೆಗಳನ್ನು ಸಮಾಪ್ತಿ ಮಾಡಿರುವ ಸಂಪನ್ನ ಸ್ವರೂಪ.

6. ನನ್ನ ಪ್ರತಿಯೊಂದು ಮಾತು ಅನ್ಯರಿಗೆ ಪ್ರಾಪ್ತಿಯನ್ನು ಕೊಡುವ ಹಾಗೆ ಇರುವ ಸತ್ಯವಚನ ಮಹಾರಾಜನು.